Literacy for a Billion

Movie: Benkiyalli Aralida Hoovu
Year: 1983

Song: Talli Kattuv Shubha Vele
Lyricist: Chi Udayashankar

ತಾಳಿ ಕಟ್ಟುವ ಶುಭ ವೇಳೆ
ಕೈಯಲ್ಲಿ ಹೂವಿನ ಮಾಲೆ
ತಾಳಿ ಕಟ್ಟುವ ಶುಭ ವೇಳೆ
ಕೈಯಲ್ಲಿ ಹೂವಿನ ಮಾಲೆ
ಯಾರಿಗೆ ಯಾರೆಂದು
ವಿಧಿ ಬರೆದಿರುವ ಎಂದೋ
ಯಾರಿಗೆ ಯಾರೆಂದು
ವಿಧಿ ಬರೆದಿರುವ ಎಂದೋ
ತಾಳಿ ಕಟ್ಟುವ ಶುಭ ವೇಳೆ
ಕೈಯಲ್ಲಿ ಹೂವಿನ ಮಾಲೆ
ನಾನೊಬ್ಬ ವಿಕಟಕವಿ
ಕೇಳಿ ಒಂದು ಕಥೆ
ಒಂದು ದೊಡ್ಡ ಕಾಡು
ಅಲ್ಲಿ ಒಂದು ದೊಡ್ಡ ಆಲದ ಮರ
ಅಕ್ಕ ತಂಗಿ ಗಿಣಿಗಳು
ಎರಡೂ ಪಕ್ಕದಿ ಕುಳಿತಿರಲು
ರೆಕ್ಕೆಯ ಬಡಿಯುತ
ಹಾರುತ ಬಂದವು
ಗಿಣಿಗಳು ಇನೆರಡು
ಅವೆರಡೂ ಗಂಡು ಗಿಣಿಗಳು
ತಂಗಿಯ ಅಂದ ಕಂಡ ಗಿಣಿಗಳು
ಪ್ರೀತಿಯ ತೋರುತಿರೆ
ಒಂದನು ಕಂಡು ಹೆಣ್ಣರಗಿಣಿಯು
ಆಸೆಯ ಕೇಳುತಿರೇ
ಮನಸ್ಸು ಒಂದಾಯ್ತು
ಒಲವು ಅರಳಿತು
ಚಿನ ರನ ನೀನೆ ನನ ಪ್ರಾಣ
ತಾಳಿ ಕಟ್ಟುವ ಶುಭ ವೇಳೆ
ಕೈಯಲ್ಲಿ ಹೂವಿನ ಮಾಲೆ
ತಾಳವು ಮೇಳವು
ಮಂಗಳ ವಾದ್ಯವು
ಕಾಡನು ತುಂಬಿತಮ್ಮಾ
ತಾಳವು ಮೇಳವು
ಮಂಗಳ ವಾದ್ಯವು
ಕಾಡನು ತುಂಬಿತಮ್ಮಾ
ಪುಷ್ಪ ವಿಮಾನದಿ
ಮದುವೆಯ ಉಡುಗೊರೆ
ಭೂಮಿಗೆ ಇಳಿಯಿತಮ್ಮಾ
ಅಂದದ ಹೆಣ್ಣಿನ ಚೆಂದದ ಬೆರಳು
ವೀಣೆಯ ಮೀಟಿತಮ್ಮಾ
ಸಿಂಗಾರಿ ಧರಿಸಿದ ಬಂಗಾರ ಗೆಜ್ಜೆಯು
ಘಲ ಘಲ ಕುಣಿಯಿತಮ್ಮಾ
ತಾಳಿ ಕಟ್ಟುವ ಶುಭ ವೇಳೆ
ಕೈಯಲ್ಲಿ ಹೂವಿನ ಮಾಲೆ
ಕಾಡಲ್ಲಿ ಮೇಯುವ ಗೋವುಗಳೆಲ್ಲಾ
ಹರಸೀ ಹೋದವಮ್ಮಾ
ಪುಟಾಣಿ ಮೊಲಗಳು
ಕೈಯನು ಕುಲುಕಿ
ಶುಭವನು ಕೋರಿತಮ್ಮಾ
ಜಿಂಕೆಯು ಒಂದು ಸಡಗರದಿಂದ

PlanetRead

Literacy for a Billion

ಮಂತ್ರವ ಹೇಳಿತಮ್ಮಾ
ಜಿಂಕೆಯು ಒಂದು ಸಡಗರದಿಂದ
ಮಂತ್ರವ ಹೇಳಿತಮ್ಮಾ
ನೂರಾರು ವರುಷ ಬಾಳಿರಿ ಎಂದು
ಆನೆಯು ಹಾಡಿತಮ್ಮಾ
ತಾಳಿ ಕಟ್ಟುವ ಶುಭ ವೇಳೆ
ಕೈಯಲ್ಲಿ ಹೂವಿನ ಮಾಲೆ
ಮಾಲೆಯ ಹಾಕಿದ ಗಿಣಿಗಳು ಅಂದು
ಆನಂದ ಹೊಂದಿತಮ್ಮಾ
ಮದುವೆಯ ಮಾಡಿದ ಅರಗಿಣಿ ಮೌನದಿ

ದೂರದಿ ನಿಂತಿತಮ್ಮಾ
ತಪ್ಪಾಗಿ ತಿಳಿದೂ ಬೆಪ್ಪಾದ ಗಂಡುಗಿಳಿ
ಕಣ್ ಕಣ್ ಬಿಟ್ಟಿತಮ್ಮಾ
ಅದು ತನಂತೆ ಏನೂ ನಡೆಯದು ಎಂಬ
ಸತ್ಯವ ಅರಿಯಿತಮ್ಮಾ
ತಾಳಿ ಕಟ್ಟುವ ಶುಭ ವೇಳೆ
ಕೈಯಲ್ಲಿ ಹೂವಿನ ಮಾಲೆ
ಯಾರಿಗೆ ಯಾರೆಂದು
ವಿಧಿ ಬರೆದಿರುವ ಎಂದೋ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*